ವಿಷಯ :- ಶಿಗ್ಗಾಂವ್ ತಾಲ್ಲೂಕಿನ ಗ್ರಾಮಗಳಿಗೆ ಬಸ್ಸಿನ ವ್ಯವಸ್ಥೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 2296 (3019)

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಗ್ಗಾಂವ ತಾಲ್ಲೂಕು ಸದಗಿವಳ್ಳಿ ನಿಡಗುಂಡಿ ಹುಳಸಿಕಟ್ಟಿ ಗ್ರಾಮಗಳಿಗೆ ಬಸ್ಸಿನ ವ್ಯವಸ್ಥೆ ಇದೆಯೇ ;

ಆ) ಸವಣೂರು ತಾಲ್ಲೂಕು ಪಕ್ಕೀರನಂದಿನಹಳ್ಳಿ ಸವ್ಣೂರಚಿಕ್ಕಮೂಗದೂರು ಅರಳಿಹಳ್ಳಿ ಗ್ರಾಮಗಳಿಗೆ ಬಸ್ಸಿನ ಸೌಕರ್ಯ ಇದೆಯೇ ;

ಇ) ಈ ಗ್ರಾಮಗಳಿಗೆ ಎಂದಿನಿಂದ ಬಸ್ಸುಗಳನ್ನು ಓಡಿಸಲಾಗುವುದು?

ಶ್ರೀ ಕೆ. ಎಸ್. ಬೀಳಗಿ (ಸಾರಿಗೆ ಸಚಿವರು) :-

ಅ) ಇಲ್ಲ

ಆ) ಇಲ್ಲ

ಇ) ನಿಡಗುಂಡಿ ಕ್ರಾಸ್ ಮುಖಾಂತರ ಸಾಕಷ್ಟು ಸಾರಿಗೆ ಸೇವೆಗಳು ಕಾರ್ಯಾಚರಣೆ ಗೊಳ್ಳುವುದರಿಂದ ನಿಡಗುಂಡಿಗೆ ಪ್ರತ್ಯೇಕ ಸಾರಿಗೆ ಸೇವೆಯನ್ನು ಒದಗಿಸುವ ಅವಶ್ಯಕತೆ ಇರುವು ದಿಲ್ಲ. ಹುಣಸಿಕಟ್ಟಿಗೆ ಒಂದು ತಿಂಗಳಿನಲ್ಲಿ ಬಸ್ಸು ಸೌಕರ್ಯವನ್ನು ಒದಗಿಸಲಾಗುವುದು. ಸದಗಿವಳ್ಳಿಗೆ ಇತ್ತೀಚಿಗೆ ರಸ್ತೆಯನ್ನು ನಿರ್ಮಿಸಲಾಗಿದ್ದು ಮಳೆಗಾಲ ಕಳೆದ ನಂತರ ಸಾರಿಗೆ ಸೇವೆಯನ್ನು ಒದಗಿಸಲಾಗುವುದು.

ಪಕ್ಕೀರನಂದಿಹಳ್ಳಿ ಮತ್ತು ಸವ್ಣೂರುಗಳಿಗೆ ವಾಹನ ಸಂಚಾರಯೋಗ್ಯ ರಸ್ತೆಗಳಿಲ್ಲದೆ ಇರು ವುದರಿಂದ ಸಾರಿಗೆ ಸೇವೆಯನ್ನು ಒದಗಿಸಲಾಗಿಲ್ಲ. ಸದರಿ ರಸ್ತೆಗಳನ್ನು ಮತ್ತೆ ಸಮೀಕ್ಷೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಚಿಕ್ಕಮುಗದೂರು ಮತ್ತು ಅರಳಿಹಳ್ಳಿಗಳಿಗೆ ಸಾರಿಗೆ ಸೌಕರ್ಯ ಒದಗಿಸುವ ಬಗ್ಗೆ ಹೇಳುವುದಾದರೆ ಸವಣೂರಿನಿಂದ ವದನೀರಲಗಿ ಹುರುಳಿಕೊಪ್ಪ ತವದೂರುಸಾಲ ಕಳಸೂರು ಮಂಟಗಣಿ ಕಲಕೊಟಿ ಹಿರೇಮುಗದೂರು ಚಿಕ್ಕಮುಗದೂರು ಮತ್ತು ಅರಳೀಹಳ್ಳಿ ಮುಖಾಂತರ ಸಾರಿಗೆ ಸೌಕರ್ಯ ಕಲ್ಪಿಸಲಾಗಿತ್ತು. ಆದರೆ ಮಳೆಯಿಂದಾಗಿ ರಸ್ತೆಯು ಕೊಚ್ಚಿ ಹೋಗಿರುವುದ ರಿಂದ ಸದರಿ ಸಾರಿಗೆ ಸೇವೆಯನ್ನು ಜುಲೈ 93 ರಿಂದ ರದ್ದುಪಡಿಸಲಾಗಿದೆ. ರಸ್ತೆಯನ್ನು ದುರಸ್ತಿ ಮಾಡಿದ ನಂತರ ಈ ಮಾರ್ಗದಲ್ಲಿ ಸಾರಿಗೆ ಸೇವೆಯನ್ನು ಪುನರಾಂಭಿಸಲಾಗುವುದು.